**ದಿನಾಂಕಃ 14-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲು: ಆರೋಪಿ ಪರ ವಕೀಲರಿಂದಃ**

1) ನಾನು ಆರೋಪಿಯ ಮುಖಾಂತರ ಬೇರೆ ಬೇರೆ ವ್ಯಕ್ತಿಗಳಿಗೆ ಕೈಗಡ ಸಾಲವನ್ನು ನೀಡುವ ಉದ್ಯೋಗವನ್ನು ಗೋಕಾಕ ನಗರದಲ್ಲಿ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಸದರಿ ಕೈಗಡ ಸಾಲವನ್ನು ಪಡೆದ ವ್ಯಕ್ತಿಗಳು ನೀಡಿದ ಬಡ್ಡಿ ಹಣವನ್ನು ಆರೋಪಿ ತಂದು ನನಗೆ ನೀಡುತ್ತಾ ಬಂದಿದ್ದಾ ಎಂದರೆ ಸರಿಯಲ್ಲ. ಅದರಂತೆ ನಾನು ಬೇರೆ ವ್ಯಕ್ತಿಗಳಿಗೆ ಹಣ ಆರೋಪಿಯ ಕಡೆಯಿಂದ ಕೊಡಿಸುವಾಗ ಚೆಕ್ಕುಗಳನ್ನು ತೆಗೆದುಕೊಂಡು ಹಣ ನೀಡಲು ತಿಳಿಸಿದ್ದಕ್ಕಾಗಿ ಆರೋಪಿ ನನ್ನ ಹಣವನ್ನು ಬೇರೆ ವ್ಯಕ್ತಿಗಳಿಗೆ ನೀಡಿ ಅವರು ಕೊಟ್ಟಂತಹ ಚೆಕ್ಕುಗಳನ್ನು ಸಹ ನನಗೆ ತಂದು ಕೊಡುತ್ತಿದ್ದಾ ಎಂದರೆ ಸರಿಯಲ್ಲ.

2) ಆರೋಪಿಯ ಕಡೆಯಿಂದ ನನ್ನ ಹಣವನ್ನು ಬೇರೆ ವ್ಯಕ್ತಿಗಳಿಗೆ ನೀಡಿಸಿದ್ದರಲ್ಲಿ ಕೆಲವೊಂದಿಷ್ಟು ಹಣ ಇಲ್ಲಿಯವರೆಗೆ ನನಗೆ ಮರಳಿ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ಪ್ರಕಾರ ಆರೋಪಿ ನನ್ನ ಹೆಂಡತಿಯ ಪೋನ ಪೇ ಖಾತೆಗೆ ರೂ. 2,50,000/- ವರೆಗೆ 2020 ರಿಂದ 2023 ರವರೆಗೆ ಹಣವನ್ನು ವರ್ಗಾವಣೆ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಹೆಂಡತಿಯ ಹೆಸರು ಅನುರಾಧಾ ಇರುತ್ತದೆ ಎಂದರೆ ಸರಿ. ನನ್ನ ಹೆಂಡತಿಯ ಪೋನ ಪೇ ಖಾತೆಗೆ ಆರೋಪಿ ಹಣ

ಕಳುಹಿಸಿದ್ದನ್ನು ನನ್ನ ಹೆಂಡತಿ ನನಗೆ ತಿಳಿಸಿರುವುದಿಲ್ಲ. ನನ್ನ ಹೆಂಡತಿಯ ಪಾಸ ಪುಸ್ತಕವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಆಗುವುದಿಲ್ಲ.

3) ನಾನು ಬೇರೆ ವ್ಯಕ್ತಿಗಳಿಗೆ ಸಾಲ ನೀಡುವಾಗ ಭದ್ರತೆಗಾಗಿ ದ್ವಿಚಕ್ರ ವಾಹನಗಳನ್ನು ಇಟ್ಟುಕೊಂಡು ಹಣವನ್ನು ನೀಡುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ. 2023 ನೇ ಸಾಲಿನಲ್ಲಿ ಗೋಕಾಕ ಶಹರ ಬಸ ನಿಲ್ದಾಣದ ಪಕ್ಕ ಮಿಶ್ರಾ ಪೇಡಾ ಎನ್ನುವ ಅಂಗಡಿಯನ್ನು ಪ್ರಾರಂಭ ಮಾಡಿದ್ದೆ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ಕೋವಿಡ್ -19 ರ ಸಮಯದಲ್ಲಿ ಉದ್ಯೋಗ ಆಗದ ಕಾರಣ ಈಗ ಬಂದು ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

4) ಆರೋಪಿಗೆ ಸೇರಿದ ಅಂಗಡಿಯ ಹೆಸರು ವೀರ ಸಾವರ್ಕರಜಿ ಕಲೆಕ್ಷನ್ ಎನ್ನುವದಾಗಿರುತ್ತದೆ ಎಂದರೆ ಸಾಕ್ಷಿಯು ಮೊದಲು ವೀರ ಸಾವರ್ಕರಜಿ ಕಲೆಕ್ಷನ್ ಎಂದು ಹೆಸರು ಇಟ್ಟು ಈಗ ಮೆನ್ಸ ಕಲೆಕ್ಷನ್ ಎಂದು ಹೆಸರು ಇಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ಬಟ್ಟೆ ವ್ಯಾಪಾರ ಮಾಡುತ್ತಿರುವುದರಿಂದ ಆರ್ಥಿಕವಾಗಿ ಸದೃಢನಾಗಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿ ನನ್ನಿಂದ ರೂ. 8,50,000/- ಹಣ ಸಾಲ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

5) ಆರೋಪಿಯ ಸ್ನೇಹಿತನಾದ ರಾಜು ಹಿರೇಮಠರವರ ಕಡೆಯಿಂದ ಆರೋಪಿಗೆ ಸೇರಿದ ಈ ಪ್ರಕರಣದ ಚೆಕ್ಕನ್ನು ತರಿಸಿಕೊಂಡು ಆರೋಪಿಯ ವಿರುದ್ದ ಇದೊಂದು ಸುಳ್ಳು ಕೇಸು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಈ ಪ್ರಕರಣದ ಚೆಕ್ಕನ್ನು ನನಗೆ ನೀಡಿಲ್ಲಾ ಎಂದರೆ ಸರಿಯಲ್ಲ. ನಾನು ಮತ್ತು ರಾಜು ಹಿರೇಮಠ ರವರು ಕೂಡಿಕೊಂಡು ಆರೋಪಿಗೆ ಕಾಡಬೇಕು ಎನ್ನುವ ಉದ್ದೇಶದಿಂದ ಇದೊಂದು ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃಇಲ್ಲ.**

( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.